ನನ್ನ ಓದು

# ಮಾನವೀಯ ಕಾಳಜಿಯನ್ನು ಅಭಿವ್ಯಕ್ತಿಸುವ ಕಥೆಗಳು



ಪದ್ಮನಾಭ ಭಟ್ ಶೇವ್ಕಾರ

'ಕಲ್ಲು ಹೂವಿನ ನೆರಳು' ಸಂಕಲನದ ಮೂಲಕ ಗಮನಸೆಳೆದಿದ್ದ ಅನಿಲ್ ಗುನ್ನಾಪುರ ಅವರ ಎರಡನೇ ಸಂಕಲನವಿದು. ಇಲ್ಲಿನ ಬಹುತೇಕ ಕಥೆಗಳಲ್ಲಿ ಕಾಣಸಿಗುವ ಒಂದು ಅಂಶ, ಅಂತರಂಗದ ಬದಲಾವಣೆ. ತನ್ನ ಆತ್ಮಸಾಕ್ಷಿ ಕೇಳುವ ಪ್ರಶ್ನೆಗಳ ಹೊಡೆತಕ್ಕೆ ತುಯ್ದಾಡುವ ಮುಖ್ಯಪಾತ್ರಗಳು ಕೊನೆಗೆ ಮಾನವೀಯತೆಯ ದಡಕ್ಕೆ ಹತ್ತುವುದು ಅನಿಲ್‌ರ ಕಥೆಗಳ ಮುಖ್ಯಪಾತ್ರಗಳ ಒಂದು ಸಾಮಾನ್ಯಗುಣ. ಕೊನೆಯ ಕಥೆಗಳಾದ 'ಹಳದಿ ಬಣ್ಣದ ಹರಳಿನುಂಗುರ' ಮತ್ತು 'ಕಸ್ತೂರಿ ಕ್ಯಾಂಟೀನ್' ಕಥೆಗಳಲ್ಲಿ ಈ ಗುಣ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ. ಆದರೆ ಆ ಕಥೆಗಳೂ ಕೊನೆಗೂ ನಮ್ಮ ಮನಸಲ್ಲಿ ಮನುಷ್ಯತ್ವದ ಒರತೆಯನ್ನು ಹುಟ್ಟಿಸಲು ಯತ್ನಿಸುತ್ತಿವೆ ಎಂಬುದನ್ನು ಗಮನಿಸಬೇಕು.

'ಲಿಂಗಾಯತ ಖಾನಾವಳಿ'ಯ ಧರೆಪ್ಪ, 'ಸರ್ವೇ ನಂಬರ್-97'ನ ಪ್ರಭಾ, 'ಆತ್ಮಸಾಕ್ಷಿ' ಪೀರಪ್ಪ, 'ಗೋಲ್‌ಗುಂಬಜ್'ನ ನಾಯಕ, ಬದುಕಿನ ಅಗ್ನಿದಿವ್ಯದಲ್ಲಿ ಅನುದಿನವೂ ದಾಟಲು ಹೆಣಗುತ್ತಿರುವವರು. ಆ ಹೆಣಗಾಟವೇ ಅವರ ಮನಸ್ಸಲ್ಲಿ ಕೆಡುಕಿನ ನೆರಳು ಸುಳಿದು ಹೋಗಲು ಕಾರಣವಾಗುತ್ತದೆ. ಅವರ ಮನೋಲೋಕವನ್ನು ಪ್ರವೇಶಿಸುವ ಕೆಡುಕಿನ ಬೀಜ ಅವರ ನೆಮ್ಮದಿಯನ್ನು ಕೆಡಿಸುತ್ತದೆ. ಬಹಿರಂಗದ ಒತ್ತಡಗಳು ಮತ್ತು ಅಂತರಂಗದ ದನಿಯ ನಡುವೆ ನಡೆಯುವ ಘರ್ಷಣೆಯಲ್ಲಿ ಕೊನೆಗೆ ಅಂತರಂಗದ ದನಿಯೇ ಗೆಲ್ಲುತ್ತದೆ. ಇದು ಕಥೆಗಾರರ ಅಂತರಂಗದ ಕಾಳಜಿಯನ್ನೂ ಧ್ವನಿಸುವ ಹಾಗಿದೆ.

'ಲಿಂಗಾಯತ ಖಾನಾವಳಿ'ಯ ಮಾದೇಶ ಊರಿಂದ ತಿರಸ್ಕೃತನಾಗಿ ಬಂದವನು. ತನ್ನ ಶ್ರಮ ಮತ್ತು ಪ್ರಾಮಾಣಿಕತೆಯೇ ಅವನಿಗೆ ಅನ್ನವನ್ನೂ, ನೆಲೆಯನ್ನೂ ನೀಡುತ್ತದೆ. ಆದರೆ ಜಾತಿಯೆಂಬ ಭೂತ ಅವನ ಕಾಲಿಗೆ ಹಗ್ಗವಾಗಿ ಹಿಂದಕ್ಕೆ ಎಳೆಯುತ್ತಲೇ ಇರುತ್ತದೆ. ಜಾತಿಯ ಕ್ರೌರ್ಯವನ್ನೂ, ಅದನ್ನು ಪೋಷಿಸುತ್ತಿರುವ ಸಮಾಜದ ರಚನೆಯನ್ನೂ ಈ ಕಥೆ ಸಂಯಮದಿಂದಲೇ ನಮ್ಮೆದುರಿಗೆ ಇಡುತ್ತದೆ. ಮೇಲ್ನೋಟಕ್ಕೆ ಸಭ್ಯವೂ, ಸುಸಂಸ್ಕೃತವೂ ಆಗಿರುವ ವ್ಯಕ್ತಿಗಳ ಮನಸ್ಸಿನೊಳಗೆ ಜಾತಿ ತಾರತಮ್ಯದ ಬೇರು ಎಷ್ಟು ಆಳವಾಗಿ ಬೇರೂರಿರಬಲ್ಲದು ಎಂಬುದನ್ನು ಇಲ್ಲಿ ಸೂಕ್ಷ್ಮವಾಗಿ ಕಟ್ಟಿಕೊಡಲಾಗಿದೆ. ಕೊನೆಗೆ ಧರೆಪ್ಪ ಜಾತಿಯನ್ನು ಮರೆತು ಮಾದ್ಯಾನನ್ನು 'ಮಾದೇಶ' ಎಂದು ಕರೆದು, ತನ್ನೊಳಗೆ ಜಾತಿದ್ವೇಷವನ್ನು ಬೆಳೆಸುತ್ತಿರುವವರನ್ನು ಹೊರಗೆ ಅಟ್ಟುವುದರೊಂದಿಗೆ ಕಥೆ ಅಂತ್ಯವಾಗುತ್ತದೆ. ಇಲ್ಲಿಯೂ ಧರೆಪ್ಪನಿಗೆ ಮಾದೇಶನ ಬಗ್ಗೆ ಗೌರವ ಬರುವುದು, ಅವನ ಪರವಾಗಿ ಗಟ್ಟಿಯಾಗಿ ಮಾತಾಡಲು ಸಾಧ್ಯವಾಗುವುದು, ಬದುಕಿನಲ್ಲಿ ನಡೆಯುವ ಘಟನೆಗಳಿಂದ ಅವನಲ್ಲಿ ಉಂಟಾಗುವ ಮನಃಪರಿವರ್ತನೆಯಿಂದಲೇ ಹೊರತು, ಸಂಘರ್ಷದ ದಾರಿಯಿಂದಲ್ಲ. ಇಲ್ಲಿ ಮಾದೇಶನಿಗೆ ತನಗೊಂದು ಘನತೆಯ ಬದುಕಿನ ಹಕ್ಕಿದೆ ಎಂಬುದರ ಅರಿವೂ ಇಲ್ಲ. ಒಳ್ಳೆಯತನ ಮತ್ತು ಪ್ರಾಮಾಣಿಕತೆಯೊಂದೇ ಅವನಿಗೆ ತಿಳಿದಿರುವುದು. ಅದರ ಬಲದಿಂದಲೇ ಅವನು ಧರೆಪ್ಪನ ಹೊಟೆಲ್‌ಅನ್ನು ಯಾವ ಪ್ರತಿಫಲದ